ಸಂಖ್ಯೆ: ಬಿ9-ನೇಮಕಾತಿ-ವಿವ-2/2017-18

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ) ಇವರ ಕಚೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-3, ದಿನಾಂಕ: 16-05-2019

ಇವರಿಗೆ,
ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಹಾಗೂ ನೇಮಕಾತಿ ಪ್ರಾಧಿಕಾರಿ.

ಸಂಬಂಧಿಸಿದ ಅರಣ್ಯ ಸಂರಕ್ಷಣಾಧಿಕಾರಿಗಳು /
ಉಪ ಅರಣ್ಯ ಸಂರಕ್ಷಣಧಿಕಾರಿಗಳು
ಹಾಗೂ ನೇಮಕಾತಿ ಪ್ರಾಧಿಕಾರಿ.

**ವಿಷಯ:** ಉಪ ವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರ ಹಾಗೂ ಅರಣ್ಯ ರಕ್ಷಕ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿ, ವೃತ್ತಿ ತರಬೇತಿಗೆ ನಿಯೋಜಿಸುವ ಕುರಿತು

**ಉಲ್ಲೇಖ:**
1. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2017-18 ದಿನಾಂಕ: 10.04.2017.
2. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-2/2017-18 ದಿನಾಂಕ: 10.04.2017.
3. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 03.01.2019.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಧಾರವಾಡ ಇವರ ಪತ್ರ ಸಂಖ್ಯೆ: ಎ5/ತರಬೇತಿ/ಅ.ರ.ಬು.ತ/ ಸಿಆರ್-12/2018-19 ದಿನಾಂಕ: 13.05.2019.

* * * * *

ಉಲ್ಲೇಖ (1) ಮತ್ತು (2) ರ ಈ ಕಛೇರಿಯ ಅಧಿಸೂಚನೆಯಲ್ಲಿ 240 ಅರಣ್ಯ ರಕ್ಷಕ ಹಾಗೂ 329 ಉಪ ವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ, ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಸಂಬಂಧ ಒಟ್ಟು 186 ಅರಣ್ಯ ರಕ್ಷಕ ಹುದ್ದೆಗಳಿಗೆ ಹಾಗೂ 250 ಉಪ ವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರರ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ವೃತ್ತ / ವಿಭಾಗಗಳಿಗೆ ಸ್ಥಳ ಹಂಚಿಕೆಯನ್ನು ಈ ಕಚೇರಿಯಿಂದ ಮಾಡಲಾಗಿರುತ್ತದೆ.

ಉಲ್ಲೇಖ (3) ರ ಈ ಕಛೇರಿಯ ಪತ್ರದಲ್ಲಿ 186 ಅರಣ್ಯ ರಕ್ಷಕ ಹುದ್ದೆಗಳಿಗೆ ಹಾಗೂ 250 ಉಪ ವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರರ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳ ಕುರಿತಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ವಿವರಿಸಲಾಗಿರುತ್ತದೆ.

ಉಲ್ಲೇಖ (4) ರ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಧಾರವಾಡ ಇವರ ಪತ್ರದಲ್ಲಿ ಅರಣ್ಯ ರಕ್ಷಕ ಅಭ್ಯರ್ಥಿಗಳಿಗೆ ದಿನಾಂಕ: 10.06.2019 ರಿಂದ 9 ತಿಂಗಳ ಬುನಾದಿ ತರಬೇತಿಯನ್ನು ತಟ್ಟಿಹಳ್ಳ ಹಾಗೂ ಚಕ್ರಾ ಅರಣ್ಯ ತರಬೇತಿ ಕೇಂದ್ರಗಳಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ ಹಾಗೂ ಉಪ ವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರರಿಗೆ ದಿನಾಂಕ: 10.06.2019 ರಿಂದ 15 ತಿಂಗಳ ಬುನಾದಿ ತರಬೇತಿಯನ್ನು ಧಾರವಾಡದ ಗುಂಗರಗಟ್ಟಿ, ಕುಶಾಲನಗರ ಹಾಗೂ ಮೈಸೂರಿನ ಇಲವಾಲ ಅರಣ್ಯ ತರಬೇತಿ ಕೇಂದ್ರಗಳಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಹೀಗಾಗಿ, ಪ್ರಸ್ತುತ ಅರಣ್ಯ ರಕ್ಷಕ ಹುದ್ದೆಗೆ ಹಾಗೂ ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಈ ಕೆಳಕಂಡ ದಿನಾಂಕಗಳಂದು ಕೈಗೊಳ್ಳಬೇಕಾದ ಕ್ರಮದ ವಿವರ ಈ ಕೆಳಕಂಡಂತಿದೆ:–

| ಕ್ರಮ ಸಂಖ್ಯೆ | ದಿನಾಂಕ | ವಿವರ |
|---|---|---|
| 1. | 03–06–2019 | ಅಭ್ಯರ್ಥಿಗಳು ಸಂಬಂಧಿಸಿದ ವಿಭಾಗ/ವೃತ್ತ ಕಚೇರಿಗಳಿಗೆ ಹಾಜರಾಗುವಂತೆ ತಾವು ಅಭ್ಯರ್ಥಿಗಳಿಗೆ ತಿಳಿಸುವುದು. |
| 2. | 03–06–2019 ರಿಂದ 06–06–2019 | ಈ ಅವಧಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳು:–<br>1. ಅಭ್ಯರ್ಥಿಗಳಿಂದ ಆಯಾ ಹುದ್ದೆಗಳಿಗೆ ಸಂಬಂಧಿಸಿದಂತೆ ಕರಾರು ಪತ್ರ (Indemnity Bond) ಅಥವಾ ಎನ್.ಎಸ್.ಸಿ ಯನ್ನು ಪಡೆಯುವುದು.<br>2. ಅಭ್ಯರ್ಥಿಯ ಕುರಿತಂತೆ ಜಾತಿ ಸಿಂಧುತ್ವ/ ಮೀಸಲಾತಿ ಕುರಿತ ದಾಖಲೆಗಳ ಸಿಂಧುತ್ವ, ಶೈಕ್ಷಣಿಕ ಅಂಕ ಪಟ್ಟಿಗಳ ಸತ್ಯಾಪನೆ ವರದಿ, ಪೋಲೀಸ್ ತಪಾಸಣಾ ವರದಿ, ಇತ್ಯಾದಿ..<br><br>ಈ ವರದಿಗಳು ಲಭ್ಯವಾಗದೇ ಇದ್ದ ಪಕ್ಷದಲ್ಲಿ ಈ ಸಂಬಂಧ ನಿಗಧಿತ ನಮೂನೆಯಲ್ಲಿ ನೂರು ರೂಪಾಯಿಗಳ ಛಾಪಾ ಕಾಗದದಲ್ಲಿ ಕರಾರು ಪತ್ರ ಬರೆಸಿಕೊಳ್ಳುವುದು.<br><br>ಒಂದು ವೇಳೆ ಅಭ್ಯರ್ಥಿಯ ಕುರಿತಂತೆ ಈ ಎಲ್ಲಾ ದಾಖಲೆಗಳು ಸ್ವೀಕೃತವಾಗಿದ್ದಲ್ಲಿ ಕರಾರು ಪತ್ರ ಬರೆಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ನೇರವಾಗಿ ನೇಮಕಾತಿ ಆದೇಶ ಹೊರಡಿಸಬಹುದು. ಕರಾರು ಪತ್ರದಂತೆ ನೇಮಕಾತಿ ಆದೇಶ ಹೊರಡಿಸುವ ಅಭ್ಯರ್ಥಿಯ ಕುರಿತಂತೆ ನೇಮಕಾತಿ ಆದೇಶದಲ್ಲಿ ಕರಾರು ಪತ್ರದಲ್ಲಿರುವ ಷರತ್ತುಗಳ ವಿವರವನ್ನು ನಮೂದಿಸುವುದು. |
| 3. | 07–06–2019 | 1. ನೇಮಕಾತಿ ಆದೇಶವನ್ನು ಹೊರಡಿಸುವುದು<br>2. ಸೇವಾ ಪುಸ್ತಕ ತೆರೆಯುವುದು.<br>3. ಅಭ್ಯರ್ಥಿಗಳನ್ನು ಕರ್ತವ್ಯಕ್ಕೆ ವರದಿ ಮಾಡಿಸಿಕೊಳ್ಳುವುದು.<br>ದಿನಾಂಕ: 07–06–2019 ರ ಸಂಜೆ ಕರ್ತವ್ಯದಿಂದ ವಿಮುಕ್ತಿಗೊಳಿಸಿ ನಿಗಧಿತ ತರಬೇತಿ ಸಂಸ್ಥೆಯಲ್ಲಿ ದಿನಾಂಕ: 09–06–2019 ರಂದು ಹಾಜರಾಗುವಂತೆ ಸೂಚನೆ ನೀಡಿ ಕಾರ್ಯ ವಿಮುಕ್ತಿಗೊಳಿಸುವುದು. |

ಉಲ್ಲೇಖ (3) ರ ಪತ್ರದಲ್ಲಿ ಈಗಾಗಲೇ ತಿಳಿಸಿರುವಂತೆ ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರರ ಹುದ್ದೆಗೆ ನೇಮಕಾತಿ ಪ್ರಾಧಿಕಾರಿಯು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆಗಿರುತ್ತಾರೆ ಹಾಗೂ ಅರಣ್ಯ ರಕ್ಷಕ ಹುದ್ದೆಗೆ ನೇಮಕಾತಿ ಪ್ರಾಧಿಕಾರಿಯು ಅರಣ್ಯ ಸಂರಕ್ಷಣಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ ಆಗಿರುತ್ತಾರೆ.

ಅರಣ್ಯ ರಕ್ಷಕ ಹುದ್ದೆಗೆ ಹಾಗೂ ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ವೃತ್ತಿ ತರಬೇತಿ ಅವಧಿಯಲ್ಲಿ ವೇತನ ಮತ್ತು ಭತ್ಯೆಗಳನ್ನು ಪಡೆಯಲು ಅನುಕೂಲವಾಗುವಂತೆ ಸೂಪರ್‌ನ್ಯೂಮರಿ ಹುದ್ದೆಗಳಿಗೆ ಸರ್ಕಾರದಿಂದ ಸದ್ಯದಲ್ಲಿಯೇ ಮಂಜೂರಾತಿ ನೀಡಲಾಗುವುದು.

ಹೀಗಾಗಿ, ಅಭ್ಯರ್ಥಿಗಳು ತರಬೇತಿ ಅವಧಿಯಲ್ಲಿ ವೇತನ ಮತ್ತು ಭತ್ಯೆಗಳನ್ನು ಆಯಾ ತರಬೇತಿ ಕೇಂದ್ರದಲ್ಲಿಯೇ ಪಡೆಯುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಅಭ್ಯರ್ಥಿಗಳ ವೇತನಕ್ಕೆ ಸಂಬಂಧಿಸಿದ ಹೆಚ್.ಆರ್.ಎಂ.ಎಸ್. / ಕೆ.ಜಿ.ಐ.ಡಿ. / ಇತ್ಯಾದಿಗಳನ್ನು ನಿಮ್ಮ ಹಂತದಲ್ಲಿಯೇ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ. ಈ ಎಲ್ಲಾ ಪ್ರಕ್ರಿಯೆಯನ್ನು ಅಭ್ಯರ್ಥಿ ವೃತ್ತಿ ತರಬೇತಿಗೆ ಹಾಜರಾದ ನಂತರ ಆಯಾ ತರಬೇತಿ ಕೇಂದ್ರದಲ್ಲಿಯೇ ಕೈಗೊಳ್ಳಲಾಗುತ್ತದೆ. ಹೀಗಾಗಿ, ನಿಮ್ಮ ವಿಭಾಗ / ವೃತ್ತಕ್ಕೆ ಹಂಚಿಕೆಯಾದ ಅಭ್ಯರ್ಥಿಗಳಿಗೆ ಯಾವುದೇ ಬೀಟ್ / ಸೆಕ್ಷನ್‌ನ್ನು ಸದ್ಯಕ್ಕೆ ಹಂಚಿಕೆ ಮಾಡುವ ಅವಶ್ಯಕತೆ ಇರುವುದಿಲ್ಲ. ವಿಭಾಗದಲ್ಲಿ / ವೃತ್ತದಲ್ಲಿ ಖಾಲಿ ಇರುವ ಹುದ್ದೆಗೆ ಎಂದು ನಮೂದಿಸಿ, ನೇಮಕಾತಿ ಆದೇಶವನ್ನು ಹೊರಡಿಸುವುದು. ವೃತ್ತಿ ತರಬೇತಿ ಪೂರ್ಣಗೊಂಡ ನಂತರ ಅಭ್ಯರ್ಥಿಗಳಿಗೆ ಬೀಟ್ / ಸೆಕ್ಷನ್‌ಗಳನ್ನು ಹಂಚಿಕೆ ಮಾಡುವುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

1. ಪ್ರತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಅರಣ್ಯ ತರಬೇತಿ ಸಂಸ್ಥೆ, ಗುಂಗರಘಟ್ಟಿ, ಧಾರವಾಡ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3. ಪ್ರತಿಯನ್ನು ಆಯ್ಕೆ ಹೊಂದಿರುವ ಅಭ್ಯರ್ಥಿಗಳ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.